

# ಯುದ್ಧ ಚರಿತ್ರೆಯ ಸ್ವಾತಂತ್ರ್ಯ ಸ್ತಂಭ

## ನ್ಯಾಷನಲ್ ಮಾನ್ಯುಮೆಂಟ್ ಆಫ್ ಡ್ಯಾಮ್ ಸ್ಕ್ವೇರ್

**ಪ್ರತಿ ಯುದ್ಧವೂ ನೋವು, ಸಂಕಟ, ಪಶ್ಚಾತ್ತಾಪ, ಅಗಾಧ ಮೌನವನ್ನು ಉಳಿಸಿಬಿಡುತ್ತದೆ. ಅಲ್ಲೇ ಹೊಸ ಜೀವನದ ಅನಿವಾರ್ಯತೆ, ಆಶಯವೂ ಹುಟ್ಟಿಕೊಳ್ಳುತ್ತದೆ. ಈ ಎರಡೂ ಭಾವಗಳ ಸಂಕೇತದಂತಿದೆ ನ್ಯಾಷನಲ್ ಮಾನ್ಯುಮೆಂಟ್ ಆಫ್ ಡ್ಯಾಮ್ ಸ್ಕ್ವೇರ್!**

■ ಕೋಟೂರ್ ಸಂಪತ್

ಯುರೋಪ್ ಖಂಡದ ವಾಯವ್ಯ ದಿಕ್ಕಿನಲ್ಲಿರುವ ನಿಸರ್ಗ ರಮಣೀಯ ಪುಟ್ಟ ರಾಷ್ಟ್ರವೇ ನೆದರ್ಲೆಂಡ್. ಆ್ಯಮ್‌ಸ್ಟರ್‌ಡ್ಯಾಂ ರಾಜಧಾನಿಯಾಗಿರುವ ಈ ರಾಷ್ಟ್ರದ ಇನ್ನೊಂದು ಹೆಸರು ಹಾಲೆಂಡ್ ಆಗಿತ್ತು. ಈಗಲೂ ಹಳಬರು ಹಾಲೆಂಡ್ ಎಂದೇ ಕರೆಯುತ್ತಾರೆ.

1945ರ ದ್ವಿತೀಯ ಮಹಾಯುದ್ಧಾನಂತರ ನಡೆದ ಸಶಸ್ತ್ರ ಹೋರಾಟಗಳಲ್ಲಿ ಮಡಿದವರ ಸ್ಮರಣಾರ್ಥ ಒಂದು ಸ್ಮಾರಕ 1952ರಲ್ಲಿ ಯೋಜಿತವಾಗಿ, 1956ರಲ್ಲಿ ಪೂರ್ಣಗೊಂಡು ಲೋಕಾರ್ಪಣೆಯಾಯಿತು. ಈ ಸ್ಮಾರಕವೇ ‘ನ್ಯಾಷನಲ್ ಮಾನ್ಯುಮೆಂಟ್ ಆಫ್ ಡ್ಯಾಮ್ ಸ್ಕ್ವೇರ್’.

ದ್ವಿತೀಯ ಮಹಾಯುದ್ಧ ಮುಗಿದ ಸಮೀಪದಲ್ಲೇ ಈ ಡ್ಯಾಮ್ ಸ್ಕ್ವೇರ್ ಜಾಗದಲ್ಲಿ ‘ಸ್ವಾತಂತ್ರ್ಯ ಸ್ತಂಭ’ ಸ್ಥಾಪಿಸಲಾಯಿತು. ಆದರೆ ಆಗಿನ ಆಡಳಿತದ ಡಚ್ ಸರ್ಕಾರ ಇದೇ ಜಾಗದಲ್ಲಿ ಶಾಶ್ವತ ಯುದ್ಧವೀರರ ಸ್ಮರಣಾರ್ಥ ಸ್ಮಾರಕ ನಿರ್ಮಿಸಬೇಕೆಂದು ಗಟ್ಟಿ ತೀರ್ಮಾನ ಕೈಗೊಂಡಿತು. ಈ ಯೋಜನೆ ರೂಪುಗೊಳ್ಳುತ್ತಿರುವಾಗಲೇ 1947ರಲ್ಲಿ ಮತ್ತದೇ ಜಾಗದಲ್ಲಿ ಇನ್ನೊಂದು ತಾತ್ಕಾಲಿಕ ಸ್ಮಾರಕ ತಲೆ ಎದ್ದಿತು. ದ್ವಿತೀಯ ವಿಶ್ವ ಸಮರದಲ್ಲಿ ಡಚ್ ವೀರರು ಹತ್ಯೆಗೀಡಾದ ಸ್ಥಳಗಳಿಂದ ಮಣ್ಣನ್ನು ಮತ್ತು ಡಚ್ ಸ್ಮಶಾನಗಳಿಂದ ತಂದ ಚಿತಾಭಸ್ಮಗಳನ್ನು ತುಂಬಿದ ಹನ್ನೆರಡು ಕುಂಭಗಳನ್ನು ಇಲ್ಲಿ ಸ್ಮರಣೆಗಾಗಿ ಇಡಲಾಯಿತು.

1946ರಲ್ಲಿ ಆ್ಯಮ್‌ಸ್ಟರ್‌ಡ್ಯಾಂ ಮೇಯರ್ ಆರ್ನಾಲ್ಡ್ ಡಿಯಾಲ್ಲಿ ನೇತೃತ್ವದಲ್ಲಿ ಜಾನ್ ರೆಡೇಕರ ವಿನ್ಯಾಸ ಮಾಡಿದ ಸ್ಮಾರಕವನ್ನು ಅಂಗೀಕರಿಸಿ 1952ರಲ್ಲಿ ಕಟ್ಟಡ ಕಾರ್ಯ ಪ್ರಾರಂಭಗೊಂಡಿತು. ನಿರ್ಮಾಣದ ಖರ್ಚುವೆಚ್ಚಕ್ಕಾಗಿ ಖಾಸಗಿ ನಿಧಿ ಸಂಗ್ರಹಿಸಲಾಯಿತು. ಈ ಸ್ಮಾರಕದ ಮಧ್ಯ ಸ್ಥಾನದಲ್ಲಿರುವುದು ಎಪ್ಪತ್ತೆರಡು ಅಡಿ ಎತ್ತರದ ಕಾಂಕ್ರೀಟ್ ಶಂಖಾಕೃತಿಯ ಕಂಬವಾಗಿದ್ದು, ಇದನ್ನು ಸಂಪೂರ್ಣವಾಗಿ ಬಿಳಿ ಟ್ರಾವರ್ಟೈನ್ (ಘನೀಕೃತ ಸುಣ್ಣದ ಕಲ್ಲು) ಕಲ್ಲಿನಿಂದ ಮುಚ್ಚಲಾಗಿದೆ.

ಕಂಬದ ಮುಂಭಾಗದಲ್ಲಿ ಯುದ್ಧ ಸಮಯದ ನೋವುಗಳನ್ನು, ಬುದ್ಧಿಜೀವಿ ಮತ್ತು ಕಾರ್ಮಿಕರ ಪ್ರತಿರೋಧವನ್ನು, ಸಂಕಟ ಹಾಗೂ ನಿಷ್ಠೆಯನ್ನು, ವಿಜಯ, ಶಾಂತಿ ಮತ್ತು ನವಜೀವನವನ್ನು ಪ್ರತಿನಿಧಿಸುವ ಮನುಷ್ಯ ಮತ್ತು ಪಾರಿವಾಳ ಶಿಲ್ಪಗಳನ್ನು ಅಳವಡಿಸಲಾಗಿದೆ. ಹಿಂಭಾಗದಲ್ಲಿ ಹಾರುತ್ತಿರುವ ಪಾರಿವಾಳ ಶಿಲ್ಪವು ವಿಮೋಚನೆಯನ್ನು ಸಂಕೇತಿಸುತ್ತದೆ. ಈ ಮಾದರಿ ವಿನ್ಯಾಸದ ಸ್ಮಾರಕವು ನಾಲ್ಕು ವರ್ಷಗಳ ಕಾಮಗಾರಿ ಮುಗಿದ ಮೇಲೆ 1956ರ ಮೇ 4ರಂದು ಆಗಿನ ನೆದರ್ಲೆಂಡ್ಸ್ ಮಹಾರಾಣಿ ಜೂಲಿಯಾನ ಅವರಿಂದ ಲೋಕಾರ್ಪಣೆ ಆಯಿತು.

1960–1970ರ ಅವಧಿಯಲ್ಲಿ ಡ್ಯಾಮ್ ಸ್ಕ್ವೇರ್‌ನಲ್ಲಿನ ರಾಷ್ಟ್ರೀಯ ಸ್ಮಾರಕವು ಅಲೆಮಾರಿ ಹಿಪ್ಪಿಗಳ ನಿತ್ಯ ಭೇಟಿ ಸ್ಥಳವಾಗಿಬಿಟ್ಟಿತು. ಆ ಸ್ವೇಚ್ಛಾಚಾರದ ಹಿಪ್ಪಿ ಗುಂಪು ಸ್ಮಾರಕವನ್ನು ಸ್ವಾತಂತ್ರ್ಯದ ಸಂಕೇತವೆಂದು ಪರಿಗಣಿಸಿ ಪ್ರತಿ ರಾತ್ರಿಯು ಭಾರೀ ಸಂಖ್ಯೆಯಲ್ಲಿ ಈ ಸ್ಮಾರಕದ ಕಟ್ಟೆಯ ಸುತ್ತಲೂ ಮಲಗಲು ತೊಡಗಿತು.

ಆಗಸ್ಟ್ 1970ರಲ್ಲಿ ಪುರಸಭೆ ಅಧಿಕಾರಿಗಳು ಜನರು ಇಲ್ಲಿ ಮಲಗುವುದನ್ನು ನಿಷೇಧಿಸಿದರು. ಈ ಆದೇಶದ ವಿರುದ್ಧ ಕೂಡಲೇ ಗಲಭೆಗಳು ಶುರುವಾದರೂ ಮರುದಿನವೇ ಅದನ್ನು ಹತ್ತಿಕ್ಕಲಾಗಿ ಹಿಪ್ಪಿಗಳಿಂದ ಸ್ಮಾರಕವನ್ನು ವಿಮೋಚನೆಗೊಳಿಸಲಾಯಿತು.

1965 ಮತ್ತು 1997–98ರಲ್ಲಿ ಈ ಸ್ಮಾರಕದ ದುರಸ್ತಿ ಹಾಗೂ ನವೀಕರಣದ ಕೆಲಸ ಯಶಸ್ವಿಯಾಗಿ ನೆರವೇರಿತು. ಆಗಲೇ ಈ ಸ್ಮಾರಕ ನೆದರ್ಲೆಂಡ್‌ನ ರಾಷ್ಟ್ರೀಯ ಪರಂಪರೆಯ ತಾಣವೆಂಬ ಹೆಗ್ಗಳಿಕೆ ಪಡೆಯಿತು. ಪ್ರತಿ ವರ್ಷ ತಪ್ಪದೇ ಮೇ 4ರಂದು ಈ ಸ್ಮಾರಕದಲ್ಲಿ ಸ್ಮರಣಾರ್ಥ ಸಮಾರಂಭವನ್ನು ಆಡಳಿತ ಸರ್ಕಾರದಿಂದಲೇ ನಡೆಸಲಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in